ಹಗುರವಾಗಿರುವುದರಿಂದ ಸದಾ ತೇಲುವ ಪ್ಲಾಸ್ಟಿಕ್ ತುಣುಕುಗಳು ಪೆಸಿಫಿಕ್ ಸಾಗರದ ಹದಿನಾರು ಲಕ್ಷ ಚದರ ಕಿ.ಮೀ. ಜಾಗದಲ್ಲಿ ತೇಲುತ್ತಿವೆ. ಅಲ್ಲಿ 1.8 ಲಕ್ಷ ಕೋಟಿ ಪ್ಲಾಸ್ಟಿಕ್ ತುಂಡುಗಳು ತೇಲುತ್ತಿವೆ. ವಿಶ್ವದ ಒಟ್ಟು ಜನಸಂಖ್ಯೆಯಿಂದ ಆ ಮೊತ್ತವನ್ನು ಭಾಗಿಸಿದರೆ ಪ್ರತಿಯೊಬ್ಬನಿಗೂ 250 ತುಂಡುಗಳು ಸಿಗುತ್ತವೆ.



ಸಾಮಾಜಿಕ ಏರಿಳಿತಗಳಿಗೂ ಕಾರಣವಾಗಿರುವ ಪ್ಲಾಸ್ಟಿಕ್ ತ್ಯಾಜ್ಯ, ಜನ–ಜಾನುವಾರುಗಳ ಆರೋಗ್ಯದ ಮೇಲೆ ಹೆಚ್ಚಿನ ದುಷ್ಪರಿಣಾಮ ಉಂಟುಮಾಡುತ್ತಿದೆ. ಭೂಮಿಯ ಮೇಲೆ ನಿರ್ವಾತ ಪ್ರದೇಶವಿರಬಹುದು, ಆದರೆ ಪ್ಲಾಸ್ಟಿಕ್ ಇಲ್ಲದ ಪ್ರದೇಶ ಇರಲು ಸಾಧ್ಯವಿಲ್ಲ ಎನ್ನುವಷ್ಟರಮಟ್ಟಿಗೆ ಅದು ನಮ್ಮನ್ನಾವರಿಸಿಕೊಂಡಿದೆ. ಹಗುರ, ಬಾಳಿಕೆ ಬರುತ್ತದೆ, ಯಾವ ಆಕಾರವನ್ನಾದರೂ ಪಡೆಯಬಲ್ಲದು ಮತ್ತು ಎಲ್ಲ ಬಣ್ಣಗಳನ್ನೂ ಹಚ್ಚಿಸಿಕೊಳ್ಳುತ್ತದೆ ಎಂಬ ಕಾರಣಕ್ಕೆ ಕಸಬರಿಗೆ, ಬೆಂಕಿ ಕಡ್ಡಿ, ಟೂಥ್ ಬ್ರಶ್‌ಗಳಿಂದ ಹಿಡಿದು ಅಡುಗೆ, ಬಚ್ಚಲು, ಬೆಡ್ ರೂಂ, ಆಪರೇಶನ್ ಥಿಯೇಟರ್, ವಾಹನ, ವಿಮಾನ, ಗಗನನೌಕೆ, ಹೃದಯದ ಪೇಸ್ ಮೇಕರ್, ಥರ್ಮಾಮೀಟರ್ ಕಡ್ಡಿ, ಕಿವುಡು ನಿವಾರಿಸುವ ಯಂತ್ರ, ಫೇಸ್‌ವಾಶ್, ಕನ್ನಡಕ, ಆಭರಣ, ಮೊಬೈಲು, ಕ್ರೆಡಿಟ್ ಕಾರ್ಡ್ ಹೀಗೆ ಸಹಸ್ರಾರು ರೂಪಗಳಲ್ಲಿ ಪ್ಲಾಸ್ಟಿಕ್ ತನ್ನ ಸಾಮ್ರಾಜ್ಯ ಸ್ಥಾಪಿಸಿಕೊಂಡಿದೆ. ಚೀನಾದವರು ತಿನ್ನುವ ಅಕ್ಕಿಗೂ ಪ್ಲಾಸ್ಟಿಕ್ ಸೇರಿಸಿದ್ದಾರೆ ಎಂಬ ವದಂತಿ ಇದೆ.

ರಾಸಾಯನಿಕವಾಗಿ ಪ್ಲಾಸ್ಟಿಕ್ ಎಂಬುದು ಹಲವು ಮಾನೋಮರ್‌ಗಳಿಂದ ರೂಪುಗೊಂಡ ಪಾಲಿಮರ್. ಮಾನೋಮರ್‌ಗಳನ್ನು ಉದ್ದನೆಯ ಸರಪಳಿಗಳಂತೆ ಒಟ್ಟು ಮಾಡಿದರೆ ಸಿಗುವ ಉತ್ಪನ್ನವೇ ಪಾಲಿಮರ್. ಇವು ಪ್ರಕೃತಿಯಲ್ಲಿ ಎಲ್ಲೆಲ್ಲೂ ಇರುತ್ತವೆ. ಕಚ್ಚಾತೈಲ ಅಥವಾ ಪೆಟ್ರೋಲಿಯಂನಿಂದಲೂ ಇವುಗಳನ್ನು ಉತ್ಪಾದಿಸಬಹುದು. ಇದನ್ನು 'ಸಿಂಥೆಟಿಕ್ ಪಾಲಿಮರ್' ಎನ್ನುತ್ತಾರೆ. ಅದರ ಒಂದು ರೂಪವೇ ಪ್ಲಾಸ್ಟಿಕ್.

ಪ್ಲಾಸ್ಟಿಕ್‌ನ ಮೂಲವಾದ ಮಾನೋಮರ್‌ಗಳು ಹೈಡ್ರೋಜನ್ ಮತ್ತು ಕಾರ್ಬನ್‌ನಿಂದ ಕೂಡಿರುತ್ತವೆ ಮತ್ತು ಸುಲಭವಾಗಿ ಮುರಿಯಲಾಗದ ಬಿಗಿಯಾದ ಬಂಧವನ್ನು ಹೊಂದಿರುತ್ತವೆ. ಸ್ವತಂತ್ರವಾಗಿರುವ ಜಲಜನಕ ಮತ್ತು ಇಂಗಾಲದಿಂದ ವಾತಾವರಣಕ್ಕೆ ಹೆಚ್ಚಿನ ಯಾವ ಅಪಾಯವೂ ಇಲ್ಲ. ಆದರೆ ಅವೆರಡೂ ಒಂದುಗೂಡಿದಾಗ ತಯಾರಾಗುವ ಪ್ಲಾಸ್ಟಿಕ್ ಸುಲಭವಾಗಿ ಕ್ಷಯಿಸುವುದಿಲ್ಲ. ಇಂಗಾಲ ಮತ್ತು ಅಮ್ಲ ಜನಕದ ಸಂಯೋಗವಾದ ಇಂಗಾಲದ ಡೈ ಆಕ್ಸೈಡ್‌ನ್ನು ಛಿದ್ರಮಾಡುವ ಶಕ್ತಿ ಸಸ್ಯಗಳಿಗಿದೆ. ಆದರೆ ಪ್ಲಾಸ್ಟಿಕ್ ಅನ್ನು ವಿಭಜಿಸುವ ಶಕ್ತಿ ವಾತಾವರಣದ ಯಾವ ವಸ್ತುವಿಗಾಗಲೀ ಜೀವಿಗಾಗಲೀ ಇಲ್ಲ. ಅಲ್ಲದೆ ಸೂರ್ಯನ ಬೆಳಕಿನ ಅತಿನೇರಳೆ ಕಿರಣದ ಸಂಪರ್ಕಕ್ಕೆ ಬರುವ ಪ್ಲಾಸ್ಟಿಕ್ ಸಣ್ಣ ಸಣ್ಣ ಚೂರುಗಳಾಗಿ ವಾತಾವರಣದ ತುಂಬೆಲ್ಲ ಹರಡಿ ಹೋಗುತ್ತದೆ. ಸಾಗರಗಳಲ್ಲಿ ಇದನ್ನು ಆಹಾರವೆಂದುಕೊಂಡು ಸೇವಿಸುವ ಮೀನುಗಳು ಕ್ರಮೇಣ ಅದನ್ನು ಸೇವಿಸುವ ಮನುಷ್ಯನಿಗೆ ವರ್ಗಾಯಿಸುತ್ತವೆ.

ಹಗುರವಾಗಿರುವುದರಿಂದ ಸದಾ ತೇಲುವ ಪ್ಲಾಸ್ಟಿಕ್ ತುಣುಕುಗಳು ಪೆಸಿಫಿಕ್ ಸಾಗರದ ಹದಿನಾರು ಲಕ್ಷ ಚದರ ಕಿ.ಮೀ. ಜಾಗದಲ್ಲಿ ತೇಲುತ್ತಿವೆ. ಹವಾಯ್ ದ್ವೀಪ ಮತ್ತು


ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಶ್ರೀ ಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.